# ವಲಸೆ ಹೋಗುವ ಪ್ರವೃತ್ತಿ

ನೀರು, ಆಹಾರ, ವಸತಿಸೌಕರ್ಯ, ಆತ್ಮರಕ್ಷಣೆ– ಇಂಥ ಮೂಲಭೂತ ಅವಶ್ಯಕತೆಗಳಿಗಾಗಿ ಒಂದು ಜಾಗದಿಂದ ಇನ್ನೊಂದೆಡೆಗೆ ವಲಸೆ ಹೋಗುವ ಪ್ರವೃತ್ತಿಯು ಪಶು, ಪಕ್ಷಿ, ಕೀಟ ಮುಂತಾದ ಎಲ್ಲ ಜೀವಿಗಳಲ್ಲೂ ಸಹಜವಾಗಿ ಇರುವಂಥದು. ಕಾಡಿನಲ್ಲಿ ವಾಸಿಸುವ ಎಷ್ಟೋ ಪ್ರಾಣಿಗಳು ತಮ್ಮ ವಾಸಸ್ಥಳಕ್ಕೆ ಯಾವುದೇ ಬಗೆಯ ಹಾನಿಯುಂಟಾದರೆ ಊರೊಳಗೆ ನುಗ್ಗಿಬಿಡುವುದು ಸಾಮಾನ್ಯ ಸಂಗತಿ. ಕಾಡಾನೆಗಳೂ, ಕಾಡು ಹಂದಿಗಳೂ ಆಹಾರದ ಆಕರ್ಷಣೆಯಿಂದಲೋ, ಬೇರೆ ಕಾರಣಗಳಿಂದಲೋ, ಜನವಸತಿಯಿರುವ ಸ್ಥಳಗಳಿಗೆ ಬಂದು, ಪೈರು ಪಚ್ಚೆಗಳನ್ನು ಹಾಳು ಮಾಡಿ ಜನಜೀವನದಲ್ಲಿ ಕಲಮಲ ಎಬ್ಬಿಸುವುದನ್ನು ನಾವು ನೋಡುತ್ತಿರುತ್ತೇವೆ. ಕೆಲವು ಪಕ್ಷಿಗಳು ವರ್ಷದ ಒಂದು ನಿರ್ದಿಷ್ಟ ಕಾಲದಲ್ಲಿ ಸಂತಾನಾಭಿವೃದ್ಧಿಯ ಸಲುವಾಗಿ ಸಾವಿರಾರು ಕಿಲೋಮೀಟರ್ ದೂರದಿಂದ ವಲಸೆ ಬಂದು, ಒಂದು ಗೊತ್ತಾದ ಜಾಗದಲ್ಲಿ ವಾಸ್ತವ್ಯ ಹೂಡಿ, ಬಂದ ಉದ್ದೇಶ ನೆರವೇರಿದೊಡನೇ ತಾವು ಹಿಂದೆ ಇದ್ದ ಪ್ರದೇಶಕ್ಕೆ ಮರಳುತ್ತವೆ. ಚಿಟ್ಟೆ, ಮಿಡತೆ ಮುಂತಾದ ಕೀಟಗಳೂ ಈ ವಲಸೆ ಹೋಗುವ ಪ್ರವೃತ್ತಿಯನ್ನು ತೋರಿಸುತ್ತವೆ. ಮನುಷ್ಯನಂತೂ ಸ್ವಭಾವತಃ ವಲಸಿಗನೇ. 'ಚರೈವೇತಿ, ಚರೈವೇತಿ' ಎಂಬುದು ಆತನ ನಿತ್ಯ ಗಾಯತ್ರಿ ಎಂದರೆ ತಪ್ಪಲ್ಲ.

ಕೆಲವೊಂದೂ ಭೂ ಭಾಗಗಳ ಇತಿಹಾಸವನ್ನು ಅವಲೋಕಿಸಿದಾಗ, ಅಲ್ಲಿನ ಮೂಲ ನಿವಾಸಿಗಳಿಗಿಂತ ಬೇರೆ ಭೂ ಭಾಗಗಳಿಂದ ವಲಸೆ ಬಂದು ನೆಲಸಿದವರೇ ಬಹು ಸಂಖ್ಯಾತರು ಎಂಬ ಸತ್ಯ ಗೋಚರಿಸುತ್ತದೆ. ಮೂಲ ನಿವಾಸಿಗಳು ವಲಸಿಗರ ಆಕ್ರಮಣಕ್ಕೆ ತುತ್ತಾಗಿ ನಾಶವಾಗಿರುತ್ತಾರೆ; ಇಲ್ಲವೇ ತಮ್ಮನ್ನು ತಾವು ಕಾಪಾಡಿಕೊಳ್ಳಲು ತಮ್ಮ ಪ್ರದೇಶದಿಂದ ಪಲಾಯನ ಮಾಡಿ, ತಾವೂ ವಲಸಿಗರಾಗಿರುತ್ತಾರೆ. ಫಲವತ್ತಾದ ಮಣ್ಣು, ಸಮೃದ್ಧಜಲ, ಖನಿಜ ಸಂಪತ್ತು– ಇಂಥ ನೈಸರ್ಗಿಕ ಆಕರ್ಷಣೆಗಳು ಮನುಷ್ಯನನ್ನು ವಲಸೆ ಬರಲು ಪ್ರಚೋದಿಸುತ್ತವೆ. ಒಟ್ಟಿನಲ್ಲಿ ಸುರಕ್ಷಿತ, ಸಮೃದ್ಧ, ಸುಖಜೀವನದ ಹಂಬಲವೇ ಮನುಷ್ಯನನ್ನು ವಲಸಿಗನನ್ನಾಗಿಸಲು ಪ್ರಧಾನ ಕಾರಣ.

ಭಾರತದ ಸಂದರ್ಭದಲ್ಲಿ ಹೇಳುವುದಾದರೆ, ಈ ಕಾಲ ಘಟ್ಟದಲ್ಲಿ ಈ ವಲಸಿಗ ಪ್ರವೃತ್ತಿ ಮನುಷ್ಯರಲ್ಲಿ ಗರಿಷ್ಠ ಸ್ತರದಲ್ಲಿ ಕಾಣಿಸಿಕೊಳ್ಳುತ್ತಿದೆ ಎನ್ನಬಹುದು. ಭಾರತದ ಗ್ರಾಮಾಂತರ ಪ್ರದೇಶಗಳಿಂದ ಯುವ ಜನರು ನಗರಗಳತ್ತ ಧಾವಿಸಿ ಬರುತ್ತಿದ್ದಾರೆ. ನಗರ ಜೀವನ ಅವರನ್ನು ಮಾಯಾಮೃಗದಂತೆ ಸೆಳೆಯುತ್ತಿದೆ. ನಗರಗಳಲ್ಲಿನ ಉದ್ಯೋಗಾವಕಾಶ, ಅಲ್ಲಿನ ಆಮೋದ ಪ್ರಮೋದಗಳು ಯುವ ಜನತೆಯನ್ನು ಸಹಜವಾಗಿಯೇ ಆಕರ್ಷಿಸುತ್ತಿವೆ. ಗ್ರಾಮ ಜೀವನದ ದೈಹಿಕ ಶ್ರಮ ಇಂದಿನ ಯುವ ಜನತೆಗೆ ಒಗ್ಗುತ್ತಿಲ್ಲ. ಕೃಷಿಯಿಂದ ದೊರೆಯುವ ಅನಿಯಿತ ವರಮಾನವೂ ಗ್ರಾಮ ಜೀವನದ ವಿಮುಖತೆಗೆ ಒಂದು ಮುಖ್ಯ ಕಾರಣ. ಹಿಂದೆ ದುರ್ಲಭವಾಗಿದ್ದ ಶಿಕ್ಷಣ– ಮುಖ್ಯವಾಗಿ ತಾಂತ್ರಿಕ ಶಿಕ್ಷಣ, ಈಗ ಗ್ರಾಮೀಣ ಮಕ್ಕಳಿಗೂ ಎಟುಕುವಂತಾಗಿದೆ. ಇಂಥ ಶಿಕ್ಷಣ ಪಡೆದ ತರುಣರು ಉದ್ಯೋಗಕ್ಕಾಗಿ ನಗರಗಳ ಕಡೆ ಮುಖ ಮಾಡುವುದು ಅನಿವಾರ್ಯವಾಗಿದೆ. ಶಿಕ್ಷಣ ಪಡೆಯದವರೂ ಸುಲಭ ಜೀವನದ ಮೋಹದಿಂದ ನಗರಗಳತ್ತ ದೌಡಾಯಿಸುತ್ತಿದ್ದಾರೆ. ಹೀಗಾಗಿ ಭಾರತದ ಹಳ್ಳಿಗಳು ಅಕ್ಷರಶಃ ಒಣಗುತ್ತಿವೆ. ಕೃಷಿಯೇ ಬೆನ್ನೆಲುಬಾಗಿದ್ದ ನಮ್ಮ ದೇಶದಲ್ಲಿ ಕೃಷಿ ಕ್ಷೇತ್ರವೆಂಬುದು ಅತ್ಯಂತ ಅಲಕ್ಷಿತ ಕ್ಷೇತ್ರವೆನ್ನಿಸಿಕೊಂಡಿದೆ. ಗ್ರಾಮೀಣ ಸಂಸ್ಕೃತಿ ನಶಿಸಿಹೋಗುತ್ತಿದೆ. ಒಂದು ಕಾಲದಲ್ಲಿ ಜೀವನೋತ್ಸಾಹದಿಂದ, ಕ್ರಿಯಾಶೀಲತೆಯಿಂದ, ಸಂಸ್ಕೃತಿಯ ಪ್ರಭೆಯಿಂದ ತುಂಬಿ ತುಳುಕುತ್ತಿದ್ದ ಭಾರತದ ಹಳ್ಳಿಗಳು ಈಗ ನಿಸ್ತೇಜವಾಗುತ್ತಿವೆ. ಅಲ್ಲಿ ದೈಹಿಕ, ಮಾನಸಿಕ ಉತ್ಸಾಹ ಕಳೆದುಕೊಂಡ ಶೂನ್ಯಮನಸ್ಕ ವೃದ್ಧರನ್ನು ಮಾತ್ರ ಕಾಣುವಂಥ ಪರಿಸ್ಥಿತಿ ಪ್ರಾಪ್ತವಾಗಿದೆ.

ಹಾಗೆಂದು ಈ ವಲಸಿಗ ಪ್ರವೃತ್ತಿ ಪಟ್ಟಣಿಗರಲ್ಲಿಲ್ಲ ಎನ್ನುವಂತಿಲ್ಲ. ನಗರದ ಯುವಕರು ಮಹಾನಗರಗಳತ್ತ ಹೊರಳುತ್ತಿದ್ದಾರೆ. ಯುವ ಜನರೆಲ್ಲರನ್ನೂ ಅಮೆರಿಕ, ಜಪಾನ್, ಜರ್ಮನಿ ಮುಂತಾದುವು ಕೈ ಚಾಚಿ ಕರೆಯುತ್ತಿವೆ. ಬಹುರಾಷ್ಟ್ರೀಯ ಕಂಪೆನಿಗಳಲ್ಲಿ ಹಗಲು ರಾತ್ರಿ ದುಡಿಯುತ್ತಿರುವ ನಮ್ಮ ಯುವಕರು ಆರ್ಥಿಕವಾಗಿ ಸದೃಢರಾಗುವರಾದರೂ, ಕೌಟುಂಬಿಕ ಸಂಬಂಧಗಳಿಂದ ಬರುವ ಆರ್ದ್ರತೆ ಅಂತಃಕರಣ– ಇತ್ಯಾದಿ ಭಾವನಾತ್ಮಕ ಸುಖಗಳಿಂದ ವಂಚಿತರಾಗುತ್ತಿದ್ದಾರೆ. ಇಂದಿನ ಭಾರತದ ಸ್ಥಿತಿಯನ್ನು ಗಮನಿಸಿದಾಗ ಕವಿ ಎಚ್.ಎಸ್.ವಿ.ಯವರ ಜೊತೆ– 'ಒಬ್ಬರ ಹಿಂದಿನ್ನೊಬ್ಬರು ಹಿಂದಿನ್ನೊಬ್ಬರು ಅಮೆರಿಕದೆಡೆಗೆ' ಕೈಕಾಲಿದ್ದವರಷ್ಟೇ ಉಳಿದರು. 'ಬೃಂದಾವನದಲಿ ಕಡೆಗೆ'– ಎಂದು ನಿಟ್ಟುಸಿರು ಬಿಡುವಂತಾಗುತ್ತದೆ.

■ ವೈನತೇಯ

---

# ಮಾತೇ ಮುತ್ತು

★ ಮಾನವನ ಬಾಳು ಗೋಪುರದ ಗಡಿಯಾರ ಇದ್ದಂತೆ. ತಲೆ ಎತ್ತಿದರೆ ಮಾತ್ರ ಕಾಣುತ್ತದೆ. ಎತ್ತಲು ತಲೆ ಎಂಬುದೊಂದು ಬೇಕು! ಎತ್ತಬೇಕು ಎಂಬುದು ಅದಕ್ಕೆ ತೋಚಬೇಕು!

–ಬೀಚಿ

★ ಸತ್ಯಕ್ಕಿಂತ ಮತಧರ್ಮವನ್ನೇ ಮೆಚ್ಚುವವನು ತನ್ನ ಗುಂಪು, ಚರ್ಚು, ಮಸೀದಿ, ದೇವಾಲಯವನ್ನೇ ಮತಧರ್ಮಕ್ಕಿಂತ ಹೆಚ್ಚು ಪ್ರೀತಿಸುತ್ತಾನೆ. ಕೊನೆಗೆ ತನ್ನನ್ನೇ ಇತರೆಲ್ಲರಿಗಿಂತ ಹೆಚ್ಚು ಎಂದುಕೊಳ್ಳುತ್ತಾನೆ.

–ಸ್ಯಾಮ್ಯುಯೆಲ್ ಟೇಲರ್ ಕೋಲ್‌ರಿಡ್ಜ್

★ ಮದುವೆ ಆದಮೇಲೆ ಅವನ ತಿಳಿವಳಿಕೆ ತಿಳಿಯಾಯಿತು. ಅವನ ಬಡಾಯಿ ಕಡಿಮೆಯಾಯಿತು! ಅಹಂಕಾರ ತಗ್ಗಿತು!

–ನಾ.ಕಸ್ತೂರಿ

★ ಮದುವೆಯಾಗದವನು 'ಇದೆಂಥ ಬಾಳು' ಎಂದು ಪರಿತಪಿಸಿದರೆ, ಮದುವೆಯಾದವನು 'ಇದೇನು ಗೋಳು' ಎಂದು ಅಳುತ್ತಾನೆ!

–ಎಂ.ಅಕಬರ ಅಲಿ

★ ಮತಾಂಧತೆಯನ್ನು ಎದುರಿಸುವ ಅಸ್ತ್ರ ಎಂದರೆ ಅಲಕ್ಷ್ಯ ಹಾಗೂ ತಾತ್ಸಾರ ಮಾತ್ರವೇ.

–ಆಲಿವರ್ ಗೋಲ್ಡ್‌ಸ್ಮಿತ್

★ ಮದುವೆಯ ಸುಖ ಬೇಕು, ಆದರೆ ಅದರ ಬಂಧನ ಬೇಡ; ರೊಮಾನ್ಸ್ ಬೇಕು, ರಿಸ್ಕ್ ಬೇಡ ಎಂದರೆ ಹೇಗೆ?

–ವಿ.ಎಂ.ಇನಾಂದಾರ್

★ ಪರಸ್ಪರ ಅರ್ಥ ಮಾಡಿಕೊಳ್ಳಲು ನಮ್ಮಲ್ಲಿ ಸ್ವಲ್ಪವಾದರೂ ಸಾಮರಸ್ಯ ಇರಬೇಕು; ಪರಸ್ಪರ ಪ್ರೇಮಿಸಲು ನಮ್ಮಲ್ಲಿ ಸ್ವಲ್ಪವಾದರೂ ವ್ಯತ್ಯಾಸ ಇರಬೇಕು.

–ಪಾಲ್ ಜೆರಾಲ್ಡ್

★ ದೇವತೆಗಳು ಹೃದಯಾಂತರಾಳದ ಪ್ರೇಮವನ್ನು ಮೆಚ್ಚುತ್ತಾರೆ; ಆದರೆ ಹೃದಯದ ಗೊಂದಲವನ್ನು ಒಪ್ಪಲಾರರು.

–ವಿಲಿಯಂ ವರ್ಡ್ಸ್‌ವರ್ತ್

★ ಮದುವೆಯಲ್ಲಿ ಕಷ್ಟಗಳಿವೆ; ಆದರೆ ಬ್ರಹ್ಮಚರ್ಯೆಯಲ್ಲಿ ಸಂತೋಷವಿಲ್ಲ.

–ಜಾನ್‌ಸನ್

★ ಮದುವೆಯ ಬಾಂಧವ್ಯ ಯಶಸ್ವಿಯಾದಾಗಲೂ 'ಪರಸ್ಪರ ಕ್ಷಮಾಗುಣ' ಇಲ್ಲದಿದ್ದರೆ ಬಹುಕಾಲ ಉಳಿಯುವುದಿಲ್ಲ.

–ಎಡ್‌ವೀಟ್

★ ಯಾವಾಗಲೂ ಪ್ರೇಮಿಸಬೇಕು, ಆದ್ದರಿಂದಲೇ ಮದುವೆ ಆಗಬಾರದು!

–ಆಸ್ಕರ್ ವೈಲ್ಡ್

★ ಗಂಡಸೊಬ್ಬ ದಡ್ಡನಿರಬಹುದು. ಅದು ಆತನಿಗೆ ಗೊತ್ತಿಲ್ಲದೆಯೂ ಇರಬಹುದು. ಮದುವೆ ಆದವ ನಾದರೆ ಹಾಗೆ ತಿಳಿಯದಿರುವುದು ಸಾಧ್ಯವೇ ಇಲ್ಲ.

–ಜಾನ್ ವಿನೋಕುರ್

★ ಯಾರನ್ನಾದರೂ ಶಿಕ್ಷಿಸಬೇಕೆಂದು ದೇವರಿಗೆ ಮನಸ್ಸು ಬಂದರೆ ಅವರಿಗೆ ಮದುವೆ ಮಾಡಿಕೊಳ್ಳುವ ಯೋಚನೆ ಬರುವಂತೆ ಮಾಡುತ್ತಾನೆ!

–ಜರ್ಮನಿ ಗಾದೆ

★ ಮದುವೆ ಆದವ ಒಳ್ಳೆಯದನ್ನು ಮಾಡುತ್ತಾನೆ; ಮದುವೆ ಆಗದವ ಮತ್ತಷ್ಟು ಒಳ್ಳೆಯದನ್ನು ಮಾಡುತ್ತಾನೆ.

–ಪೋಲಿಷ್ ಗಾದೆ